ಚಂದ್ರನಾಥ್, ಎನ್. ಮರಿಶಾಮಾಚಾರ್, ಅ.ಲ. ನರಸಿಂಹನ್, ಶೀಲಾಗೌಡ, ಪ.ಸ. ಕುಮಾರ್ ಮೊದಲಾದವರ 'ಹಡಪದ್ – ಕೆನ್' ಪರಂಪರೆ. ಇಂತಹವರ ನಡುವೆ ಇವರೆಲ್ಲರಿಗಿಂತಲೂ ವಿಭಿನ್ನವಾಗಿ ಬೆಳೆದು, ಹಡಪದ್ ಅನಂತರ ಅಲ್ಲಿಯೇ ಪ್ರಾಂಶುಪಾಲರೂ ಆಗಿ ಕಲಾಶಾಲೆಯನ್ನು ಮುನ್ನಡೆಸಿದವರು ಜೆ.ಎಂ.ಎಸ್. ಮಣಿ.

ಹಡಪದ್ ಅವರ ಕೆನ್ ಪರಂಪರೆ ಎಂದರೆ ದೃಶ್ಯಕಲೆಯ 'ನಿನ್ನೆ', 'ಇಂದು' ಮತ್ತು 'ನಾಳೆ'ಗಳ ಪ್ರಜ್ಞಾಪ್ರವಾಹದ ಅರಿವು. ಹಡಪದ್ ಅವರ ಗುರುತ್ವದ 'ಕಲಾದ್ವೈತ್ಯತೆ'ಯ ಆವರಣವನ್ನು ಪ್ರವೇಶಿಸಿದ ಬಹುತೇಕ ಎಲ್ಲರೂ ವಿಶಿಷ್ಟವಾಗಿ ಬೆಳೆದು ಹೆಮ್ಮರಗಳಾಗಿದ್ದಾರೆ. ಇಂದು ಕಾಣುವ ನಮ್ಮಂತಹವರೆಲ್ಲರೂ ಒಂದಲ್ಲ ಒಂದು ಸಂದರ್ಭದಲ್ಲಿ ಅವರ ಸಂಪರ್ಕಕ್ಕೆ ಬಂದವರೇ. ಹಾಗೆ ಬಂದವರೆಲ್ಲರೂ ಪ್ರಶ್ನಿಸುವ ಮನೋಧರ್ಮವನ್ನು ರೂಢಿಸಿಕೊಳ್ಳುತ್ತಾರೆ. ಫ್ರೆಂಚ್ ತಾತ್ವಿಕ ಡೆರಿಡಾನ ಪರಿಚಯ ಇಲ್ಲದ ಕಾಲದಲ್ಲಿಯೇ ಹಡಪದ್ ನಿರಚನೆಯ ತತ್ವಗಳನ್ನು ಅರಗಿಸಿಕೊಂಡಿದ್ದರು. ಅವರು ಪ್ರಶ್ನಿಸುವುದನ್ನು ಉತ್ತೇಜಿಸುತ್ತಿದ್ದರು. ಓದುವ ಹುಚ್ಚನ್ನು ಹಚ್ಚುತ್ತಿದ್ದ ಅವರು ಪುಸ್ತಕಗಳಿಗೆ ನೀಡಿದ್ದ ಪ್ರಾಮುಖ್ಯತೆ ಗಣನೀಯ. ಅಂತಹ ವಿಶಿಷ್ಟ ಸಂದರ್ಭದ ನಡುವೆಯೂ, ಪುಸ್ತಕ ಪ್ರೀತಿಯಿಂದ ವಿಮುಖರಾಗಿಯೂ ಜೆ.ಎಂ.ಎಸ್. ಮಣಿ ಜನಪ್ರಿಯ ಕಲಾವಿದರಾಗಿ, ಕಲಾಶಿಕ್ಷಕರಾಗಿ ಬೆಳೆದು ಬಂದದ್ದು ಗಮನಾರ್ಹ. ಅವರೊಳಗಿನ ಕಲಾವಿದನ ಅನ್ವೇಷಕರಾಗಿ ಹಡಪದ್‌ರ ಪಾತ್ರ ಅಪೂರ್ವ. ಬದುಕುವ ಛಲ ಎಂದರೆ ಹಡಪದ್ ಹಾದಿ, ಎನ್ನುವಂತೆ ಸರಳ ಮತ್ತು ಕಲಾತ್ಮಕವಾಗಿ ಬದುಕಿ, ಜೀವನ ಸೌಂದರ್ಯದ ಪ್ರಾತ್ಯಕ್ಷಿಕೆಯ ಮಾದರಿಯಾಗಿ ಮಣಿಯವರಿಗೆ ಅವರು ಕಂಡರು. ಬದುಕಲು ಹಲವು ಹಾದಿಗಳನ್ನು ತೋರಿದರು. ಕಲೆಯಿಂದಲೇ ಬದುಕು ರೂಪಿಸಿಕೊಂಡಿದ್ದ ಕಲಾಮಂದಿರದ ಅ.ನ.



ಪತ್ನಿ ಎಸ್. ರಾಣಿ ಅವರೊಂದಿಗೆ ಜೆ.ಎಂ.ಎಸ್. ಮಣಿ